ಆ) ಮುಖ್ಯಮಂತ್ರಿಗಳ ಕಾರ್ಯಾಲಯ ಹಾಗೂ ಕಂದಾಯ ಇಲಾಖೆಗೆ ವಹಿಸಲಾಗಿದೆ. ಹಣ ದುರುಪಯೋಗ ತಡೆಗಟ್ಟಲು ಖಜಾನೆ ಮೂಲಕ ವ್ಯವಹರಿಸಲಾಗುತ್ತಿದೆ.

ಇ) ವಂತಿಗೆ ಹಣವನ್ನು ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ಜಮಾ ಮಾಡಲಾಗಿದೆ. ಇದರಲ್ಲಿ ರೂ. 5.00 ಕೋಟಿಯನ್ನು ಬಾಗಲಕೋಟೆಯಲ್ಲಿ ಸ್ಥಳಾಂತರಗೊಳ್ಳಲಿರುವ ಹೊಸ ಗ್ರಾಮಗಳಲ್ಲಿ ಮನೆ ಕಟ್ಟಿಸಲು ಉಪಯೋಗಿ ಸಲಾಗುತ್ತಿದೆ. ರೂ.1,72,17,760–00 ಗಳನ್ನು ಬಾಗಲಕೋಟೆ ಬಿಜಾಪುರ, ಗದಗ್ ಜಿಲ್ಲೆಗಳಲ್ಲಿ ಮನೆ ಕಟ್ಟಿಸಲು ಉಪಯೋಗಿಸಲಾಗುತ್ತಿದೆ.

ದಿನಗೂಲಿ ನೌಕರರು

595 (1057) ಶ್ರೀ ದೊಡ್ಡಪ್ಪಗೌಡ ಶಿವಲಿಂಗಪ್ಪಗೌಡ ಪಾಟೀಲ್ ನಾರಿಬೋಳ್ : ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ಇಲಾಖೆಯಲ್ಲಿ ದಿನಾಂಕ: 1–07–1984 ರ ನಂತರ ಕೆಲಸಕ್ಕೆ ಸೇರಿರುವ ದಿನಗೂಲಿ ನೌಕರಿಗೆ ದಿನಾಂಕ: 1–04–1998 ರಿಂದ 31–03–2007 ರವರೆಗೆ ಮತ್ತು 1–04–2008 ರಿಂದ 31–10–2009 ರವರೆಗೆ ಹೆಚ್ಚಿಗೆಯಾಗಿರುವ ದಿನಗೂಲಿ ವೇತನ ಬಾಕಿ ಪಾವತಿಯಾಗ ದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಆ) ಬಂದಿದ್ದಲ್ಲಿ, ಯಾವಾಗ ಪಾವತಿ ಮಾಡಲಾಗುವುದು;

ಇ) ದಿನಾಂಕ: 1–10–2009 ರಿಂದ ಇಲ್ಲಿಯವರೆಗೆ ದಿನಗೂಲಿ ನೌಕರರ ಸಂಬಳ ಕೂಡ ಪಾವತಿಯಾಗದಿದ್ದು, ಸಂಬಳ ಪಾವತಿಗೆ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ವೆಂಕಟರಮಣಪ್ಪ (ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು) :

ಅ) ರೇಷ್ಮೆ ಇಲಾಖೆಯ ರಾಜ್ಯ ವಲಯದಲ್ಲಿ ದಿನಾಂಕ: 01/07/1984ರ ನಂತರ ಕೆಲಸಕ್ಕೆ ಸೇರಿರುವ ದಿನಗೂಲಿ ನೌಕರರಿಗೆ ದಿನಾಂಕ: 01/04/1998 ರಿಂದ 31/03/2007 ರವರೆಗೆ ಮತ್ತು 01/04/2008 ರಿಂದ 31/10/2009ರವರೆಗೆ ಹೆಚ್ಚಿಗೆಯಾಗಿರುವ ದಿನಗೂಲಿ ವೇತನದ ಬಾಕಿ ಪಾವತಿಸಲು ರೂ. 169.37 ಲಕ್ಷಗಳ ಅನುದಾನ ಅಗತ್ಯವಿದೆ. ರೂ. 169.37 ಲಕ್ಷಗಳ ಹೆಚ್ಚುವರಿ ಅನುದಾನ ಬಿಡುಗಡೆಯ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ರೂ. 169.37 ಲಕ್ಷಗಳ ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವಂತೆ ಕೋರಿ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿದೆ. ಅದು ಬಿಡುಗಡೆಯಾದ ನಂತರ ಬಾಕಿ ಪಾವತಿಸಲು ಕ್ರಮಕೈಗೊಳ್ಳ ಲಾಗುವುದು.

ಇ) ದಿನಾಂಕ: 01/04/2008 ರಿಂದ ಅನ್ವಯವಾಗುವಂತೆ ರೂ. 881/–ಗಳ ಜೀವನ ನಿರ್ವಹಣಾ ಭತ್ಯೆ ಹೆಚ್ಚಾಗಿದ್ದು, ಇದನ್ನು ನವೆಂಬರ್ 2009ರ ಮಾಹೆಯಿಂದ ಪಾವತಿಸಲಾಗುತ್ತಿದೆ. ಫೆಬ್ರವರಿ–2010 ಮಾಹೆಯ ವೇತನವನ್ನು ಕೆಲವು ಕಚೇರಿಗಳಲ್ಲಿ ಪಾವತಿಸಬೇಕಾಗಿರುತ್ತದೆ. ಹೆಚ್ಚುವರಿ ಅನುದಾನ ಬಿಡುಗಡೆಯಾದ ಕೂಡಲೇ ಪಾವತಿಸಲು ಕ್ರಮಕೈಗೊಳ್ಳ ಲಾಗುವುದು.

ಬಿಜಾಪುರ ಜಿಲ್ಲಾ ಜಲಾನಯನ ಅಭಿವೃದ್ಧಿ

596 (908) ಡಾ: ಬಗಲಿ ಸಾರ್ವಭೌಮ ಸಾತಗೌಡ : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ ಯವರನ್ನು ಅವಧಿಗೆ ಮುನ್ನಾ ವರ್ಗಾವಣೆ (Pre mature) ಮಾಡಿರುವುದ ಸರ್ಕಾರದ ಗಮನಕ್ಕೆ ಬಂದಿರುವುದೆ;

ಆ) ಬಂದಿದಲ್ಲಿ, ಈ ಅಧಿಕಾರಿ ವರ್ಗಾವಣೆಗೆ ಕಾರಣಗಳೇನು (ವಿವರ ನೀಡುವುದು)

ಇ) ಈ ಅಧಿಕಾರಿಯ ಮೇಲೆ ಗುರುತರವಾದ ಆಪಾದನೆಗೆ ಅಥವಾ ಸಾರ್ವಜನಿಕ ದೂರುಗಳು ಇರುವುದೇ (ವಿವರ ಒದಗಿಸುವುದು);

ಈ) ಸದರಿ ಅಧಿಕಾರಿಯ ವರ್ಗಾವಣೆಯಲ್ಲಿ ಮಾರ್ಗಸೂಚಿ ಅನುಸರಿಸಲಾಗಿದೆಯೇ;

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು) :

ಅ) ಹೌದು.

ಆ) ಆಡಳಿತಾತ್ಮಕ ಕಾರಣ

ಇ) ಇಲ್ಲ.

ಈ) ಹೌದು.